**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

<u>ಸಿ.ಸಿ. ನಂಬರ 4512/2021</u> ಸಿ.ಡಬ್ಲೂ.**7** ಪಿ.ಡಬ್ಲೂ.**5**

| | |
|---|---|
| ಹೆಸರು | ಮಲ್ಲಪ್ಪಾ |
| ತಂದೆ/ಗಂಡ | ಗುರಪ್ಪಾ ಬಂಡೆ |
| ವಯಸ್ಸು | 30 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಮಮದಾಪೂರ |

ದಿನಾಂಕ 29-01-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ 1 ರಿಂದ 6, 8 ರಿಂದ 14 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಸಹಿ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

<u>ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:</u>

ದಿಃ 26-12-2019 ರಂದು ಬೆ.09.00 ರಿಂದ 09.30 ಗಂಟೆಯವರೆಗೆ , ನನ್ನ ಹಾಗೂ ಚಾಸ-6 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಮಾಡಿ ಸ್ಥಳದಿಂದ ಒಂದು ಹಿರೋ ಕಂಪನಿಯ ಮೋಟಾರ ಸೈಕಲ ನಂಬರ ಕೆ ಎ 32/ಇಪಿ-6970 ಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿದರೂ ಸಹಿತ ಮಾಡಿರುವುದಿಲ್ಲ ಅಂತಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರಃ ವಕೀಲರಿಂದ:</u>

ಪಾಟೀ ಸವಾಲು ಇಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ